


ಆಗ 'ಸಿಮಿಲಿ'ಯನ್ನು ನೆನಪು ಮಾಡಿಕೊಳ್ಳಿ. **'he was as like as lion in the battlefield'** ಎಂದು ಇರುತ್ತದೆ. ಅಂದರೆ 'ಯುದ್ಧರಂಗದಲ್ಲಿ ಅವನು ಸಿಂಹದಂತೆ' ಎಂದರೆ ಸಿಮಿಲಿ. ಅಲ್ಲಿ, 'ಅವನು ಮತ್ತು ಸಿಂಹ'ದ ನಡುವೆ ಹೋಲಿಕೆ ಇದೆ. ಮೆಟಾಫರ್‌ನಲ್ಲಿ ಹೋಲಿಕೆ ಇಲ್ಲ. 'ಯುದ್ಧರಂಗದಲ್ಲಿ ಅವನು ಸಿಂಹವೇ' ಎನ್ನಲಾಗಿದೆ. ಅಂದರೆ ಹೋಲಿಸಬಹುದಾದ್ದನ್ನೆ ವ್ಯಕ್ತಿತ್ವ ಎಂದು ಹೇಳಿದಾಗ ಸಿಮಿಲಿಯು ಮೆಟಾಫರ್ ಆಯಿತು. 'ಸಿಮಿಲಿ'ಯೂ ನಿಮಗೆ ಗೊತ್ತಿಲ್ಲ ಎಂದು ಭಾವಿಸಿ. ಆಗ ಇನ್ನೂ ಹಿಂದಕ್ಕೆ ಹೋಗಿ. ಕನ್ನಡದಲ್ಲಿ ಉಪಮಾಲಂಕಾರವನ್ನು ತಿಳಿದಿರುತ್ತೀರಿ. ಅದೇ ಇಂಗ್ಲಿಷ್‌ನಲ್ಲಿ 'ಸಿಮಿಲಿ'. ಇನ್ನೀಗ ಸಿಮಿಲಿಯಿಂದ ಮೆಟಾಫರ್ ಅನ್ನು ಅರ್ಥ ಮಾಡಿಕೊಳ್ಳಿ. ಉಪಮಾಲಂಕಾರವೂ ನಿಮಗೆ ಗೊತ್ತಿಲ್ವ, ಆಗಲೂ ಚಿಂತೆ ಬೇಡ, ನಾವು ಮಾತನಾಡುವಾಗ, 'ಅವನು ನಾಯಿಯಂತೆ ಬಂದ, ಬೆಕ್ಕಿನಂತೆ ಬಂದ' ಎಂದೆಲ್ಲ ಹೇಳಿರುತ್ತೇವೆ ಅಥವಾ ಹೇಳುವುದನ್ನು ಕೇಳಿರುತ್ತೇವೆ. 'ನಾಯಿಯಂತೆ ಬಂದ' ಎಂದರೆ ಏನರ್ಥ ಎಂದು ಯೋಚಿಸಿ. ಆಗ ಉಪಮಾಲಂಕಾರ ಗೊತ್ತಾಗುತ್ತದೆ. ಉಪಮಾಲಂಕಾರದಿಂದ 'ಸಿಮಿಲಿ'. ಸಿಮಿಲಿಯಿಂದ ಮೆಟಾಫರ್. ಆಗ 'ಅವನು ಬೆಕ್ಕಿನಂತೆ' ಎಂದರೆ ಸಿಮಿಲಿ, 'ಅವನು ಬೆಕ್ಕೇ' ಎಂದರೆ ಮೆಟಾಫರ್ ಎಂದು ಗೊತ್ತಾಗಿಬಿಟ್ಟಿರುತ್ತದೆ. ಮೆಟಾಫರ್ ಗೊತ್ತಾದರೆ ಪರ್ಸೋನಿಫಿಕೇಷನ್ ಸುಲಭ. ಪರ್ಸೋನಿಫಿಕೇಷನ್ ಗೊತ್ತಾದಾಗ ಸಿನೆಕ್ಡೋಕಿ ಸುಲಭ. ಹೀಗೆ ಯಾವುದೇ ಪಠ್ಯದಲ್ಲಿ ಕ್ಲಿಷ್ಟ ವಿಷಯ ಬಂದಾಗ ಅದನ್ನೇ ಹೋಲುವ ಹಿಂದಿನ ಕಲಿಕೆಗೆ ಹೋಗಿ ಮುಂದಿನ ಕಲಿಕೆಗೆ ಬರುವುದು ಅರ್ಥ ಮಾಡಿಕೊಳ್ಳಲು ಇರುವ ಒಂದು ವಿಧಾನವಾಗಿದೆ.

## ವೈಯಕ್ತಿಕ ಸಂವಾದ

ತರಗತಿಯ ಬೋಧನೆ ಸಾಮಾನ್ಯವಾಗಿ ಸಾಮಾನ್ಯ ಸಾಮರ್ಥ್ಯದ ವಿದ್ಯಾರ್ಥಿಗಳನ್ನು ದೃಷ್ಟಿಯಲ್ಲಿಟ್ಟುಕೊಂಡು ನಡೆಯುತ್ತದೆ. ಏಕೆಂದರೆ ಯಾವುದೇ ತರಗತಿಯಲ್ಲಿ ಅಸಾಧಾರಣ ಪ್ರತಿಭಾವಂತರು ಮತ್ತು ಕಲಿಕೆಯಲ್ಲಿ ತೀರಾ ಹಿಂದುಳಿದವರ ಸಂಖ್ಯೆ ಕಡಿಮೆ. ಆದರೆ ಒಂದು ಸಾಮಾನ್ಯ ಕಲ್ಪನೆಯನ್ನಿಟ್ಟುಕೊಂಡು ಬೋಧಿಸಿದಾಗ ಈ ಮೂರೂ ಗುಂಪಿನಲ್ಲೂ ಕೆಲವರಿಗೆ ಕೆಲವೊಂದು ವಿಷಯಗಳು ಅವರದೇ ವೈಯಕ್ತಿಕ ಕಾರಣಕ್ಕಾಗಿ ಅರ್ಥವಾಗದೆ ಉಳಿಯಬಹುದು. ವಿದ್ಯಾರ್ಥಿಗಳು ತಾವಾಗಿ ಹೇಳದ ಹೊರತು ಯಾರಿಗೆ ಯಾವುದು ಕ್ಲಿಷ್ಟವಾಗಿದೆಯೆಂದು ಅಧ್ಯಾಪಕರಿಗೆ ಗೊತ್ತಾಗುವುದಿಲ್ಲ. ಬೋಧನೆಯ ನಂತರ ಅಧ್ಯಯನ ಮಾಡಿದಾಗ ಅರ್ಥವಾಗಿರುತ್ತದೆ ಎಂಬ ಸಾಮಾನ್ಯ ನಂಬಿಕೆಯನ್ನು ಅಧ್ಯಾಪಕರು ಇರಿಸಿಕೊಳ್ಳುತ್ತಾರೆ. ಅಧ್ಯಯನ ಮಾಡಿದಾಗಲೂ ನಿಮಗೆ ಅರ್ಥವಾಗದೆ ಇದ್ದರೆ ಅಧ್ಯಾಪಕರ ಬಳಿ ಕೇಳಬೇಕು. ಹಾಗೆ ಕೇಳುವಾಗ ಅಲ್ಲಿ ಒಬ್ಬನೇ/ಳೇ ವಿದ್ಯಾರ್ಥಿ ಇರುತ್ತಾನೆ/ಳೆ. ಆಯಾ ವಿದ್ಯಾರ್ಥಿಯ ವ್ಯಕ್ತಿತ್ವಕ್ಕನುಗುಣವಾಗಿ ಹೇಗೆ ಹೇಳಿದರೆ ಅರ್ಥವಾಗುತ್ತದೆಯೋ ಹಾಗೆ ಹೇಳಲು ಆಗುತ್ತದೆ.

'ಕಠಿಣ ವಿಷಯ' ಎಂದು ನಾವು ಭಾವಿಸಿದ ಸಂಗತಿ ಎಷ್ಟೋ ಸಂದರ್ಭಗಳಲ್ಲಿ ಅಷ್ಟೇನೂ ಕ್ಲಿಷ್ಟವಾಗಿರುವುದಿಲ್ಲ. ಆ ವಿಷಯವನ್ನು ಅರ್ಥ ಮಾಡಿಕೊಳ್ಳಲು ನಾವು ಬಳಸಿದ ಮಾರ್ಗ ಸಮರ್ಪಕವಾಗಿರುವುದಿಲ್ಲ ಅಷ್ಟೇ. ಕ್ಲಿಷ್ಟ ವಿಷಯಗಳನ್ನು ತಿಳಿದುಕೊಳ್ಳಲು ಬೇರೆಯದೇ ಮಾರ್ಗವನ್ನು ಕಂಡುಕೊಳ್ಳುವುದು ನಮಗೆ ಸಾಧ್ಯವಾದರೆ ಎಂಥ ಸಂಗತಿಯನ್ನೂ ಅರ್ಥ ಮಾಡಿಕೊಳ್ಳಬಹುದು.